

ಬೆಂಗಳೂರು ನಗರ ವಾಸಿಗಳಿಗೆ ಇದು ಅನುಭವ ಆಗಿರಬಹುದು. ರಸ್ತೆಗುಂಟ ನಡೆದುಕೊಂಡು ಹೋಗುತ್ತಿರುತ್ತೀರಿ. ಅಲ್ಲೆಲ್ಲೋ ಮರೆಯಲ್ಲಿ ಬಿಳಿ ವಸ್ತ್ರಧಾರಿ ಪೊಲೀಸರು ಇದ್ದಕ್ಕಿದ್ದಂತೆ ಗೋಚರಿಸುತ್ತಾರೆ. ಅದಾಗಲೇ ಮೂರ್ನಾಲ್ಕು ವಾಹನಗಳನ್ನು ನಿಲ್ಲಿಸಿ ದಂಡ ಕಟ್ಟಿಸಿಕೊಳ್ಳುತ್ತಿರುತ್ತಾರೆ. ಅವರನ್ನು ಕಂಡ ತಕ್ಷಣ ನಿಮ್ಮ ಪಾದಗಳು ನಿಮ್ಮನ್ನು ಎಳೆದುಕೊಂಡು ಔಸಿಕೊಳ್ಳಲು ಹೊಂಚುಹಾಕುತ್ತವೆ! ನಿಧಾನಕ್ಕೆ ಹೊಳೆಯುತ್ತದೆ, ನೀವು ನಟರಾಜ ಸರ್ವೀಸಿನಲ್ಲಿರುವಿರೆಂದು. ಆ ಮಟ್ಟಿಗಿನ ಸಂಬಂಧ ಈ ನಗರದ ನಿವಾಸಿಗಳದ್ದು, ಇಲ್ಲಿನ ಟ್ರಾಫೀಕು ಪೊಲೀಸಿನವರದ್ದು. ಅವರನ್ನು 'ಪೊಲೀಸ್ ಮಾಮ' ಎಂದು ಕರೆಯುತ್ತೇವೆ. ಕೆಲವೊಮ್ಮೆ ನೀವು ಯಾವುದೋ ಮೂಲೆಯಲ್ಲಿ ಅವಿತಿರುವ ರಿಪೇರಿ ಅಂಗಡಿ ಹುಡುಕುತ್ತಿದ್ದಲ್ಲಿ ಮೆಲ್ಲಗೆ ಹಿಂದಿನಿಂದ ನಿಮ್ಮ ಬಳಿ ಸಾರಿ ಕಿವಿಗೆ ಏನನ್ನೋ ಉಸುರಿಹೋಗುತ್ತಾರೆ, ಅವರನ್ನೂ ನಾವು 'ಮಾಮ' ಎಂದೇ ಕರೆಯುತ್ತೇವೆ. ಇನ್ನು ಪಾರ್ಕಿನಲ್ಲಿ ಮುಸ್ಸಂಜೆಯ ತನಕ ಗೆಳತಿ ಜೊತೆ ಕುಳಿತಿದ್ದಿರೋ, ನೆಲಕ್ಕೆ ಲಾಟಿ ಬಡಕೊಂತ ಬರುತ್ತಾರೆ 'ಖಾಕಿ ಮಾಮಗಳು'. ಬಾಡಿಗೆ ಮನೆ, ಸೈಟು ಪೈಟು ಕೊಡಿಸುತ್ತೀವೆಂಬ ರಿಯಲ್ ಎಸ್ಟೇಟ್ ಮಾಮಗಳು, ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ಹುಡುಕುವ ಬ್ರೋಕರ್ ಮಾಮಗಳು, ಎಲ್ಲಿ ನೋಡಿದರಲ್ಲಿ ಮಾಮ! ಈ ನಗರದಲ್ಲಿ ಮಾಮ ಎಂದರೆ ನಿಮ್ಮಿಂದ ಏನನ್ನೋ ಪೀಕುವ ಮಂದಿ ಎಂದರ್ಥ. ಬಳಕೆಯು ಬಹುಶಃ 'ಮಾಮೂಲಿ' ವಸೂಲಿ ಮಾಡುವ ಎಂಬ ಮೂಲದಿಂದ ಹುಟ್ಟಿರಬಹುದೇ?

ಈ ಗದ್ದಲದಲ್ಲಿ ನಮ್ಮೆಲ್ಲರ ನಿಜಾರ್ಥದ ಮಾಮ ಕಳೆದೇ ಹೋಗಿದ್ದಾರೆ. ಅಮ್ಮನ ಸೋದರ. ಅಕ್ಕನ ಗಂಡ. ಅತ್ತೆಯ ಗಂಡ. ಅವರೆಲ್ಲ ಈಗ ನಮ್ಮ ಪಾಲಿಗೆ ಅಂಕಲ್‌ಗಳು. ಅವರೊಂದಿಗಿನ ಬಾಂಧವ್ಯವೂ ಶುಷ್ಕ. ಇಲ್ಲೀಗ ದೊಡ್ಡಪ್ಪನೂ ಅಂಕಲ್, ಚಿಕ್ಕಪ್ಪನೂ ಅಂಕಲ್, ಕಿರಾಣಿ ಅಂಗಡಿಯ ಮಾಲೀಕನೂ ಅಂಕಲ್. ಸಂಬಂಧಗಳಲ್ಲೇ ಅತಿ ಪ್ರೀತಿಗೆ ಪಾತ್ರವಾದ ಹೆಚ್ಚಾಗಿ ಮಕ್ಕಳಿಗೆ ಪ್ರಿಯವಾಗಿದ್ದ ಮಾಮ ಈಗ ಕಾಣೆಯಾಗಿರುವನು. ಬರುವಾಗ ಕೈಲಿ ಏನಾದರೊಂದು ಉಡುಗೊರೆ ಹಿಡಿದು ಬರುತ್ತಿದ್ದ ಮಾಮನೆಲ್ಲಿ? ಸಿಕ್ಕಾಕಿಕೊಂಡರೆ ಸಾಕು, ಏನಾದರೊಂದು ಕಸಿಯುವ ಈ ನಗರದ ಮಾಮಗಳೆಲ್ಲಿ? ಇವರನ್ನು ಮಾಮ ಎನ್ನುತ್ತ ನಮ್ಮ ಮಾಮನಿಗೂ ಇವರಿಗೂ ಇವರ ಉದ್ಯೋಗಕ್ಕೂ ಒಟ್ಟಿಗೆ ಅವಮಾನ ಮಾಡುತ್ತಿದ್ದೇವೆ ಅನಿಸುವುದಿಲ್ಲವೇ?

ನನಗಿದ್ದ ಮಾಮ ಅಮ್ಮನ ಅಣ್ಣ. ಅವರು ಈಗ ನೆನಪು ಮಾತ್ರ. ನನ್ನ ಬಾಲ್ಯದ ಮುಖ್ಯ ಭಾಗವನ್ನು ತಾತನ ಮನೆಯಲ್ಲಿ ಕಳೆದಿದ್ದರಿಂದ ನನ್ನ ಮತ್ತು ಮಾಮನ ಸಂಬಂಧ ಕೇವಲ ಹಬ್ಬಹರಿದಿನಗಳ ಭೇಟಿಯಲ್ಲದ ದಿನನಿತ್ಯ ಒಡನಾಟದ ಅವಿನಾಭಾವ ಸಂಬಂಧ. ಆಗಾಗ್ಗೆ ನೆನಪಾಗುತ್ತಾರೆ, ಹಲವಾರು ಕಾರಣಗಳಿಗೆ. ಅವರು ಬೇರೆಯವರ ಮಾಮನಂತೆ ಸಾಮಾನ್ಯನೂ ಆಗಿರಲಿಲ್ಲ. ಬಹಳ ವಿಶೇಷ ವ್ಯಕ್ತಿ. ನೆನೆದಾಗ ಕೆಲವು ಸಲ ಕಣ್ಣು ಒದ್ದೆಯಾಗುತ್ತದೆ.

ನಮ್ಮ ತಾತನಿಗೆ ಐದು ಜನ ಹೆಣ್ಣು ಮಕ್ಕಳು, ಮಾಮ ದೊಡ್ಡ ದೊಡ್ಡಮ್ಮನ ನಂತರದವರು. ಒಬ್ಬನೇ ಮಗ. ಭಾರತೀಯ ಕುಟುಂಬ ವ್ಯವಸ್ಥೆ ಪ್ರಕಾರ ಅವರ ಬದುಕು ಎಷ್ಟು ವಿಜೃಂಭಣೆಯಿಂದ ಕೂಡಿರಬೇಕಿತ್ತು! ಇದೀಗ ಹಿನ್ನೋಟಕ್ಕೆ ಹೊರಳಿದಾಗ ಅವರ ಬದುಕು ದಾರುಣವಾಗಿತ್ತು ಎನಿಸುತ್ತದೆ. ಅಥವಾ ಇನ್ನೂ ದಾರುಣವಾಗಬಹುದಾಗಿದ್ದುದರಿಂದ ತಪ್ಪಿಸಿಕೊಂಡು ಸಹ್ಯ ಬದುಕು ಬಾಳಿದರೇನೋ. ಅದು ಅವರೇ ಹೇಳಬೇಕು, ಆದರೆ ಅವರು ಈಗ ಇಲ್ಲ. ಇದ್ದರೂ ಬಹುಶಃ ಅವರಿಗೆ ಈ ತರಹದ ಉತ್ತರ ಕೊಡಲಾಗುತ್ತಿರಲಿಲ್ಲ. ಇಂದಿನ ವೈಜ್ಞಾನಿಕ ಪರಿಭಾಷೆಯಲ್ಲಿ ಹೇಳಬಹುದಾದರೆ ಅವರಿಗೆ ಕಲಿಕಾ ಊನತೆ, ಲರ್ನಿಂಗ್ ಡಿಸ್ಲೆಕ್ಸಿಯ ಇತ್ತು. ನಮ್ಮಲ್ಲಿ ಯಾವಾಗಲೂ ಅವರಿಗೆ ವಿದ್ಯೆ ಹತ್ತಲಿಲ್ಲ ಅಂತ ಮಾತ್ರ ಹೇಳುತ್ತಿದ್ದರು. ವಿದ್ಯೆ ಎಷ್ಟೋ ಜನಕ್ಕೆ ಹತ್ತುವುದಿಲ್ಲ, ಆದರೂ ಸಾಮಾನ್ಯ ಜ್ಞಾನವುಳ್ಳವರಾಗಿರುತ್ತಾರೆ. ಮನುಷ್ಯ ಭಾವನೆಗಳ ಸಹಜ ಅಭಿವ್ಯಕ್ತಿವುಳ್ಳವರಾಗಿರುತ್ತಾರೆ. ಮಾಮ ತೀರ ಸಹಜರೂ ಅಲ್ಲ, ತೀರ ದಡ್ಡರೂ ಅಲ್ಲ, ಭಾವುಕರೂ ಅಲ್ಲ, ನಿರ್ಭಾವುಕರೂ ಅಲ್ಲ ಎಂಬಂತೆ ಬದುಕಿದ್ದರು. ಅದಷ್ಟೇ ಸಮಸ್ಯೆಯಾಗಿದ್ದಿದ್ದರೆ.

ನಮ್ಮ ತಾತ ಊರಿಗೆ ಹಿರಿಯರು. ಆ ಹಳ್ಳಿ ಹೊಸತಾಗಿ ಹುಟ್ಟಿಕೊಂಡಿದ್ದು ತಾತ ತನ್ನ ಯೌವನದಲ್ಲಿ ಪಕ್ಕದ ಕಿರುಪಟ್ಟಣದಿಂದ ವಲಸೆ ಬಂದು ಜಮೀನು ಮಾಡಿದ್ದರು. ಊರಿನ ಹಳೆಯ ಹೆಸರೇ 'ಹೊಸಗುಡ್ಲು' (ಹೊಸ ಗುಡಿಸಲು) ಎಂದು. ಬಾವಿ ಬೋರ್ ವೆಲ್, ತೋಟ ಗದ್ದೆ, ವಿಶಾಲ ಮನೆ – ಹೀಗೆ ಅಪಾರ ಆಸ್ತಿ ಗಳಿಸಿದ್ದವರಿಗೆ ಐದು ಜನ ಹೆಣ್ಮಕ್ಕಳ ನಡುವೆ ಒಬ್ಬೇ ಒಬ್ಬ ಗಂಡು ಮಗ, ಹೆತ್ತವರಲ್ಲಿ ಅಗಾಧ ನಿರೀಕ್ಷೆ, ಮಾಮ ನೋಡಿದರೆ ಹೀಗೆ! ಇನ್ನೊಬ್ಬ ಮಗ ಹುಟ್ಟಿದ್ದನಂತೆ, ತರುಣಾವಸ್ಥೆಯಲ್ಲಿ ಹಾವು ಕಡಿದು ಸತ್ತನಂತೆ. ಸಹಜವಾಗಿ ಆತ ಬುದ್ಧಿವಂತನೇ ಇರುತ್ತಾನೆ. ಸೃಷ್ಟಿಯ ತಿಕ್ಕಲುತನವೇ ಹಾಗಲ್ಲವೇ. ತಾತ ಅಜ್ಜಿ ಸೇರಿದಂತೆ ಎಲ್ಲರೂ ಇಲ್ಲದ ಮಾಮನನ್ನು ಇರುವ ಮಾಮನನ್ನು ನೆನೆನೆದು ದುಃಖಿಸುತ್ತಿದ್ದುದೇ ಆಗಿತ್ತು. ಮಾಮನಿಗೆ ತಿಳಿವಳಿಕೆ ಕಲಿಸಲು ತಾತ ಬಹಳಾನೆ ಬಡಿಯುತ್ತಿದ್ದರಂತೆ. ಮದುವೆ ವಯಸ್ಸಿಗೆ ಬಂದರೂ ಮಾಮನಲ್ಲಿ ಕಿಂಚಿತ್ ಬದಲಾವಣೆ ಕಾಣಲಿಲ್ಲವಂತೆ. ಇನ್ನು ಹೊರಗಿನಿಂದ ಹೆಣ್ಣು ತಂದರೆ ಸೊಸೆ ಎಲ್ಲಿ ತಮ್ಮನ್ನೆಲ್ಲ ಕಸಬರಿಕೆ ಮಾಡಿಕೊಂಡುಬಿಡುತ್ತಾಳೋ ಎಂಬ ಭಯ. ಜೊತೆಗೆ ಮಗನಿಗಂತೂ ತಿಳಿಯಲ್ಲ, ಸೊಸೆಯೂ ಅಂತವಳೇ ಆದರೆ... ಇಷ್ಟೆಲ್ಲ ಆಸ್ತಿಪಾಸ್ತಿ ನೋಡಿಕೊಳ್ಳುವವರು ಯಾರು? ಮೊದಲಾಗಿ ಏನೂ ಬರದ ಈತನಿಗೆ ಹೊರಗಿನಿಂದ ಹೆಣ್ಣು ಕೊಡುವವರಾದರೂ ಯಾರು? ಕೊಟ್ಟರೂ ಅಂತಹ ಹೆಣ್ಣು ಹೇಗಿರುತ್ತದೆ?

ಯೋಚಿಸಿ ನಮ್ಮ ದೊಡ್ಡ ದೊಡ್ಡಮ್ಮನ ದೊಡ್ಡ ಮಗಳನ್ನು ತಂದುಕೊಂಡರು. ಬೆಂಗಳೂರಿನ ನಗರದಲ್ಲಿ ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದಂತಹ ಸುಂದರ ಹುಡುಗಿ. ಮದುವೆ ಮಾಡಿ ಮೂರ್ನಾಲ್ಕು ವರ್ಷಗಳ ನಂತರ ಮನೆಗೆ ಕರಕೊಂಡು ಬಂದರಂತೆ. ಅರ್ಥಾತ್ ದೊಡ್ಡವಳಾದ ಮೇಲೆ ಒಲ್ಲೆ ಎಂದುಬಿಡುತ್ತಾಳೇನೋ ಎಂದು ಅಪ್ರಾಪ್ತ ವಯಸಿನಲ್ಲೇ ತಾಳಿ ಕಟ್ಟಿಸಿದ್ದರು. ಸಂಬಂಧದಲ್ಲಿ ನನಗೆ ಅವರು ಅತ್ತೆಗಿಂತಲೂ ಅಕ್ಕ ಮೊದಲು. ಹಾಗಾಗಿ ನಾನು ಅವರನ್ನು ಅಕ್ಕ ಅಂತಲೇ ಕರೆಯುತ್ತೇನೆ. ಇದೆಲ್ಲ ಬಹಳ ಹಿಂದಿನ ಕತೆ. ನಾನು ತಾತನ ಮನೆ ಸೇರುವಷ್ಟರಲ್ಲಿ ಮದುವೆಯಾಗಿ ಹತ್ತು ವರುಷ ಕಳೆದಿರಬಹುದು. ಎಲ್ಲ ಸಮೃದ್ಧ ಮನೆತನಗಳಲ್ಲೂ ಏನೋ ಒಂದು ಊನ ಇದ್ದೇ ಇರುತ್ತದೆ. ಗದ್ದೆ ತೋಟ ದಿನ್ನೆ ಎತ್ತುಗಳು ಎಮ್ಮೆಗಳು ಮಾಡಲು ಕೈಲಾಗದಷ್ಟು ಜಮೀನು. ಮಾಡಿದರೆ ಕೈತುಂಬ ಕೆಲಸ. ಅಕ್ಕ ಅದಾಗಲೇ ಮನೆಗೆ ಹೊಂದಿಕೊಂಡಿದ್ದರು. ತಾತ ಮನೆಯನ್ನಿನ್ನೂ ಮುನ್ನಡೆಸುತ್ತಿದ್ದರು. ಅಲ್ಲಿಗಾಗಲೇ ತಾತ ಮಾಮನಿಗೆ ಬಡಿಯುವುದನ್ನು ಅಕ್ಕ ನಿಲ್ಲಿಸಿದ್ದರು. ಹೆಂಡತಿ ಎದುರೇನೆ ಗಂಡನಿಗೆ ಹೊಡೆಯುವುದನ್ನು ಯಾರು ತಾನೆ ಸಹಿಸಿಕೊಂಡಿರುತ್ತಾರೆ? ಅಕ್ಕ ಮಾಮನಿಗೊಂದು ಘನತೆಯುಕ್ತ ಬದುಕು ಕಟ್ಟಿಕೊಡಲು ಹೆಣಗುತ್ತಿದ್ದರು. ತಾತನಿಗೂ ವಯಸ್ಸಾಗುತ್ತಿತ್ತು. ಸ್ಥಿತ್ಯಂತರದ ಕಾಲ. ಅಕ್ಕನ ಬದುಕು ನೆನೆದರೆ ಪಾಪ ಅನಿಸುತ್ತದೆ. ಮದುವೆಯಾಗಿ ಅಷ್ಟು ವರ್ಷಗಳಾಗಿತ್ತು, ಮಕ್ಕಳೇ ಆಗಿರಲಿಲ್ಲ. ಅಜ್ಜಿಯ ಮನಸಿನಲ್ಲಿ ಮಾಮನಿಗೆ ಇನ್ನೊಂದು ಮದುವೆ ಮಾಡುವ ಆಲೋಚನೆಯೂ ಸುಳಿದಿತ್ತು!

ನನ್ನ ಬಾಲ್ಯದ ಮೂರು ವರುಷಗಳು ಶುರುವಾಗಿದ್ದು ಅಲ್ಲಿಂದ. ನನಗಿದೆಲ್ಲ ಹೊಳೆಯುತ್ತಿರುವುದು ಈಗ. ಆಗೆಲ್ಲ ನಮ್ಮ ಪ್ರಕಾರ ಮಾಮ ಚೆನ್ನಾಗೇ ಇದ್ದರು, ದೈನಂದಿನ ವ್ಯವಸಾಯದ ಕೆಲಸಗಳಲ್ಲಿ ಮೈಮುರಿದು ದುಡಿಯುತ್ತಿದ್ದರು. ಹೊಟ್ಟೆತುಂಬ ಉಣ್ಣುತ್ತಿದ್ದರು. ಗಡತ್ತಾಗಿ ನಿದ್ರೆ ಹೊಡೆಯುತ್ತಿದ್ದರು. ಮಾನವ ಪ್ರಾಣಿಯ ಮೂಲಭೂತ ನಡುವಳಿಕೆಗಳಲ್ಲೇನೂ ವ್ಯತ್ಯಾಸವಿದ್ದಂತೆ ತೋರುತ್ತಿರಲಿಲ್ಲ. ಆದರೆ